# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿ ಸಲುವಾಗಿ ಕೃಷ್ಣಾ ನದಿಯ ನಾರಾಯಣಪುರ ಬಸವಸಾಗರ ಜಲಾಶಯದ ಹಿನ್ನೀರಿನಿಂದ ಏತ ನೀರಾವರಿ ಯೋಜನೆ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿಯ ಪ್ರಥಮ ಹಂತದ ಪಂಪ್ ಹೌಸ್ ನಿರ್ಮಾಣ ಮಾಡಲು ಹುನಗುಂದ ತಾ: ಹುಳ್ಳಳ್ಳಿ ಗ್ರಾಮದ ಸರ್ವೆ ನಂ:**88/1** (4 ಎಕರೆ), **81/2** (28 ಗುಂಟೆ), ಮತ್ತು 82/1(4 ಗುಂಟೆ), ಜಮೀನುಗಳನ್ನು ಸಣ್ಣ ನೀರಾವರಿ ಇಲಾಖೆಗೆ ನೀಡುವುದರ ಕುರಿತು

**ಓದಲಾಗಿದೆ:-**

1 ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಕೃಭಾಜನಿನಿ / ವ್ಯ.ನಿ /ತಾಂ.ಸ-4/ಕು.ನಿ.ಯೋ. (ಕುಷ್ಟಗಿ)/ 2021-22/351 ದಿನಾಂಕ:10.06.2021.

2 ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಕೃಭಾಜನಿನಿ/ವ್ಯ.ನಿ/130.ನಿ.ನಿ.ಮ.ಸ./ವಿ.ಸಂ:45/ತಾಂ.ಸ-4/ 2021-22/1007 ದಿನಾಂಕ:27.07.2021.

*****

**ಪ್ರಸ್ತಾವನೆ:-**

ಮೇಲೆ ಓದಲಾದ (1) ಪತ್ರದಲ್ಲಿ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿ ಸಲುವಾಗಿ ಕೃಷ್ಣಾ ನದಿಯ ನಾರಾಯಣಪುರ ಬಸವಸಾಗರ ಜಲಾಶಯದ ಹಿನ್ನೀರಿನಿಂದ (ಆಲಮಟ್ಟಿ ಜಲಾಶಯದ ಕೆಳಭಾಗದಲ್ಲಿ) ಏತ ನೀರಾವರಿ ಯೋಜನೆ ಮೂಲಕ ಕುಷ್ಟಗಿ ತಾಲ್ಲೂಕಿನ ಒಟ್ಟು 15 ಕೆರೆಗಳಿಗೆ ನೀರು ತುಂಬಿಸಲು ಹುನಗುಂದ ತಾಲ್ಲೂಕಿನ ಹುಳ್ಳಳ್ಳಿ ಗ್ರಾಮದ ಹತ್ತಿರ ಒಳಹರಿವು ಕಾಲುವೆ ಹಾಗೂ ಜಾಕ್ ವೆಲ್ ಕಮ್ ಪಂಪ್ ಹೌಸ್ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆಯೆಂದು, ಅದರಂತೆ ಮೊದಲ ಹಂತದ ಪಂಪ್ ಹೌಸ್ ಅನ್ನು ಬಸವಸಾಗರ ಜಲಾಶಯದ ಎಫ್.ಆರ್. ಎಲ್. ವ್ಯಾಪ್ತಿಗೆ ಒಳಪಡುವ ಸರ್ವೆ ನಂ:88/1 (4 ಎಕರೆ), 81/2 (38 ಗುಂಟೆ), 82/1 (4 ಗುಂಟೆ) ಮತ್ತು 82/2 (38 ಗುಂಟೆ) ರಲ್ಲಿ ನಿರ್ಮಾಣ ಮಾಡಲು ಮತ್ತು ಸದರಿ ಯೋಜನೆಯ ಒಳಹರಿವಿನ ಕಾಲುವೆಯ ತಳಮಟ್ಟದ ಆರ್.ಎಲ್.487.10 ಮೀ ಆಗಿದ್ದು, ಮಳೆಗಾಲದ ಅವಧಿಯಲ್ಲಿ (90 ದಿನಗಳಲ್ಲಿ) ಲಭ್ಯವಿರುವ ನೀರನ್ನು ಉಪಯೋಗಿಸಿಕೊಳ್ಳಲು ಸದರಿ ಸರ್ವೆ ನಂಬರ್ ಜಮೀನುಗಳಲ್ಲಿ ಒಳಹರಿವು ಕಾಲುವೆ ಹಾಗೂ ಜಾಕ್ವೆಲ್ ಕಮ್ ಪಂಪ್ಹೌಸ್ ಹಾಗೂ ಎಲೆಕ್ಟ್ರೋಮೆಕ್ಯಾನಿಕಲ್ ವರ್ಕ್ಸ್ ನಿರ್ಮಿಸಲು ಅವಶ್ಯವಿರುವ ಒಟ್ಟು 6 ಎಕರೆ ಜಮೀನು ನೀಡಿ ಕಾಮಗಾರಿ ನಿರ್ಮಾಣಕ್ಕೆ ಅನುಮತಿ ನೀಡಲು ಮುಖ್ಯ ಇಂಜಿನೀಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಬಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪೂರ ಇವರು ದಿನಾಂಕ:20.02.2021ರ ಪತ್ರದಲ್ಲಿ ಕೋರಿರುತ್ತಾರೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ರವರು ವರದಿ ಮಾಡಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ಮೇಲೆ ಓದಲಾದ (2) ಪತ್ರದಲ್ಲಿ ಮುಖ್ಯ ಇಂಜಿನೀಯರ್, ಕೃ.ಭಾ.ಜ.ನಿ., ಕಾ. ಮತ್ತು ನಿ. ವಲಯ, ನಾರಾಯಣಪುರ ರವರು ಶಿಫಾರಸ್ಸಿನೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ದಿನಾಂಕ:22.07.2021 ರಂದು ಜರುಗಿದ 130ನೇ ನಿಗಮ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿದ್ದು, ಮಂಡಳಿಯು ನಿಗಮದ ವ್ಯಾಪ್ತಿಯ ನಾರಾಯಣಪುರ ಜಲಾಶಯದ ಹಿನ್ನೀರಿನ ಮುಳುಗಡೆ ಪ್ರದೇಶದಲ್ಲಿ ಹಾಗೂ ಜಲಾಶಯದ ಸಂಗ್ರಹಣಾ ವ್ಯಾಪ್ತಿಯಲ್ಲಿ ಯು.ಕೆ.ಪಿ. ಹೆಸರಿನಲ್ಲಿರುವ ಸರ್ವೆ ಸಂ.**88/1** ರ **4** ಎಕರೆ, **81/2** ರ **28** ಗುಂಟೆ ಹಾಗೂ **82/1** ರ **4** ಗುಂಟೆ ಜಮೀನುಗಳು ಬರುತ್ತಿದ್ದು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿ ಸಲುವಾಗಿ ಕೃಷ್ಣಾ ನದಿಯ ನಾರಾಯಣಪುರ ಬಸವಸಾಗರ ಜಲಾಶಯದ ಹಿನ್ನೀರಿನಿಂದ (ಆಲಮಟ್ಟಿ ಜಲಾಶಯದ ಕೆಳಭಾಗದಲ್ಲಿ) ಏತ ನೀರಾವರಿ ಯೋಜನೆ ಮೂಲಕ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಒಟ್ಟು **15** ಕೆರೆಗಳಿಗೆ ನೀರು ತುಂಬಿಸಲು

ಹುನಗುಂದ ತಾಲ್ಲೂಕಿನ ಹುಳ್ಳಳ್ಳಿ ಗ್ರಾಮದ ಹತ್ತಿರ ಒಳಹರಿವು ಕಾಲುವೆ (intake channel) ಹಾಗೂ ಜಾಕ್ ವೆಲ್ ಕಮ್ ಪಂಪ್ ಹೌಸ್ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅನುವಾಗುವಂತೆ ಕಾಲಕಾಲಕ್ಕೆ ಅನ್ವಯವಾಗುವ ಭೂ ದರದಂತೆ ಭೂ ಬಾಡಿಗೆಯನ್ನು ಸಂದಾಯ ಮಾಡುವ ಹಾಗೂ ಸದರಿ ಕಾಮಗಾರಿಯಿಂದ ನೀರಿನ ಸಂಗ್ರಹಣಾ ಸಾಮರ್ಥ್ಯ ವ್ಯತ್ಯಾಸಗೊಳಿಸದಿರುವ ಮತ್ತು ಸರ್ಕಾರ ವಿಧಿಸುವ ಇತರೆ ಷರತ್ತುಗಳೊಂದಿಗೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ನಿಗಮದ ನಿರ್ದೇಶಕರ ಮಂಡಳಿಯ ಶಿಫಾರಸ್ಸಿನನ್ವಯ, ಜಮೀನನ್ನು ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವನೆಗೆ ಅನುಮೋದನೆಯನ್ನು ಕೋರಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಇ-ಸಂಖ್ಯೆ:ಜಸಂಇ 117 ಕೆಬಿಎನ್ 2021, ಬೆಂಗಳೂರು,**
**ದಿನಾಂಕ: 08.10.2021**

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿ ಸಲುವಾಗಿ ಏತ ನೀರಾವರಿ ಯೋಜನೆ ಮೂಲಕ ಕುಷ್ಟಗಿ ತಾಲ್ಲೂಕಿನ ಒಟ್ಟು 15 ಕೆರೆಗಳಿಗೆ ನೀರು ತುಂಬಿಸಲು ಕೃಷ್ಣಾ ನದಿಯ ನಾರಾಯಣಪುರ ಬಸವಸಾಗರ ಜಲಾಶಯದ ಹಿನ್ನೀರಿನಿಂದ ಬಾಗಲಕೋಟ ಜಿಲ್ಲೆ ಹುನಗುಂದ ತಾಲೂಕು ಹುಳ್ಳಳ್ಳಿ ಗ್ರಾಮದ ಹತ್ತಿರ ಒಳಹರಿವು ಕಾಲುವೆ (intake channel) ಹಾಗೂ ಜಾಕ್‌ವೆಲ್ ಕಮ್ ಪಂಪ್ ಹೌಸ್ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಣ್ಣ ನೀರಾವರಿ ಇಲಾಖೆ ವತಿಯಿಂದ ಉದ್ದೇಶಿಸಲಾಗಿದ್ದು, ಮೊದಲನೆ ಹಂತದ ಪಂಪ್ ಹೌಸ್ ನಿರ್ಮಾಣಕ್ಕಾಗಿ ಹುನಗುಂದ ತಾಲೂಕು ಹುಳ್ಳಳ್ಳಿ ಗ್ರಾಮದ ಸರ್ವೆ ಸಂ.88/1 ರ 04 ಎಕರೆ, 81/2 ರ 28 ಗುಂಟೆ ಹಾಗೂ 82/1 ರ 04 ಗುಂಟೆ (ಒಟ್ಟು 4 ಎಕರೆ – 32 ಗುಂಟೆ) ಜಮೀನುಗಳು ನಾರಾಯಣಪೂರ ಜಲಾಶಯದ ಹಿನ್ನೀರಿನ ಮುಳುಗಡೆ ಪ್ರದೇಶದ ಹಾಗೂ ಜಲಾಶಯದ ಸಂಗ್ರಾಹಣಾ ವ್ಯಾಪ್ತಿಯಲ್ಲಿನ ಯು.ಕೆ.ಪಿ. ಹೆಸರಿನಲ್ಲಿರುವ ಸದರಿ ಸರ್ವೆ ಜಮೀನುಗಳಿಗೆ ನಿಯಮಾನುಸಾರವಾಗಿ ಕಾಲಕಾಲಕ್ಕೆ ಅನ್ವಯವಾಗುವ ಭೂ ದರದಂತೆ ಭೂ ಬಾಡಿಗೆಯನ್ನು ಸಂದಾಯ ಮಾಡುವ ಹಾಗೂ ಸದರಿ ಕಾಮಗಾರಿಯಿಂದ ನೀರಿನ ಸಂಗ್ರಹಣಾ ಸಾಮರ್ಥ್ಯ ವ್ಯತ್ಯಾಸಗೊಳಿಸದಿರುವ ಷರತ್ತುಗಳೊಂದಿಗೆ ಜಮೀನನ್ನು ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಿ ಆದೇಶಿಸಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಆದೇಶ ಸಂ. ಆರ.ಡಿ. 32 ಎಲ್‌ಜಿಪಿ 2019 ದಿನಾಂಕ:01.02.2021 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

8/10/2021
(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಆಡಿಟ್), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು
7. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು
8. ಮುಖ್ಯ ಇಂಜಿನೀಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
9. ಮುಖ್ಯ ಇಂಜಿನೀಯರ್, ಕೃ.ಭಾ.ಜ.ನಿ. ಕಾ. & ನಿ. ನಾರಾಯಣಪೂರ

10. ಮುಖ್ಯ ಇಂಜಿನೀಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜ.ಸಂ.ಇ. ಇವರ ಆಪ್ತ ಕಾರ್ಯದರ್ಶಿಗಳು.
12. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು (ಗ್ರೇಡ್-1)
13. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
14. ಸರ್ಕಾರದ ಉಪ ಕಾರ್ಯದರ್ಶಿಗಳು (ಕೃಭಾಜನಿನಿ) ಜ.ಸಂ.ಇ ಇವರ ಆಪ್ತ ಸಹಾಯಕರು
15. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.